ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 30–09–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ವಿಶ್ವ ಹಿರಿಯ ನಾಗರಿಕರ ದಿನಾಚರಣೆ – 2015<br><br>ಉದ್ಘಾಟನೆ:<br><br>ಸಿದ್ದರಾಮಯ್ಯ,<br>ಮುಖ್ಯ ಮಂತ್ರಿಗಳು,<br>ಕರ್ನಾಟಕ ಸರ್ಕಾರ.<br><br>ಪ್ರಶಸ್ತಿ ಪ್ರದಾನ:<br><br>ಶ್ರೀ ಉಮಾಶ್ರೀ,<br><br>ಕನ್ನಡ ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಖಾತೆ ಸಚಿವರು. | 1–10–2015<br><br>ಗುರುವಾರ<br><br>ಬೆಳಿಗ್ಗೆ<br><br>11–00 ಗಂಟೆಗೆ | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು |
| 2. | ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನ ಆಚರಣೆ:<br><br>ಉದ್ಘಾಟನೆ:<br><br>ಯು.ಟಿ. ಖಾದರ್,<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1–10–2015<br><br>ಗುರುವಾರ<br><br>ಬೆಳಿಗ್ಗೆ<br><br>11–00 ಗಂಟೆಗೆ | ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಆವರಣ, ಬೆಂಗಳೂರು. |

| | | | |
|---|---|---|---|
| | ಸಚಿವರು.<br><br>ಅಧ್ಯಕ್ಷತೆ:<br><br>ಆರ್. ರೋಷನ್ ಬೇಗ್,<br><br>ಮೂಲಸೌಕರ್ಯ ಅಭಿವೃದ್ಧಿ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು. | | |
| 3 | ಪತ್ರಿಕಾಗೋಷ್ಠಿ:<br><br>ಅಧ್ಯಕ್ಷರು<br><br>ಕನ್ನಡ ಅಭಿವೃದ್ಧಿ ಪ್ರಾಧಿಕಾರ | 1-10-2015<br><br>ಗುರುವಾರ<br><br>ಮಧ್ಯಾಹ್ನ<br><br>1-00 ಗಂಟೆಗೆ | ಕೊಠಡಿ ಸಂಖ್ಯೆ 222<br><br>ಎರಡನೇ ಮಹಡಿ,<br><br>ವಿಧಾನ ಸೌಧ,<br><br>ಬೆಂಗಳೂರು-560 001 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ವಾರ್ತಾಸೌಧದಲ್ಲಿ
# ಮಹಾತ್ಮಗಾಂಧೀ ಪ್ರತಿಮೆ ಅನಾವರಣ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬೆಂಗಳೂರಿನ ಭಗವಾನ್ ಮಹಾವೀರ್ ರಸ್ತೆಯಲ್ಲಿರುವ ವಾರ್ತಾಸೌಧದಲ್ಲಿ ನೂತನವಾಗಿ ಪ್ರತಿಷ್ಠಾಪಿಸುತ್ತಿರುವ ಮಹಾತ್ಮ ಗಾಂಧೀ ಪ್ರತಿಮೆಯನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಕ್ಟೋಬರ್ 2 ರಂದು ಬೆಳಿಗ್ಗೆ 10-00 ಗಂಟೆಗೆ ಅನಾವರಣ ಮಾಡುವರು. ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಖಾತೆ ಸಚಿವ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸುವರು.

ಅಂದು ಬೆಳಿಗ್ಗೆ 9–00 ಗಂಟೆಯಿಂದ ವಾರ್ತಾಸೌಧದಲ್ಲಿ ರಾಮಚಂದ್ರ ಹಡಪದ್ ಮತ್ತು ತಂಡದವರಿಂದ ಗಾಂಧೀ ಪ್ರಿಯ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಲ್ಲದೆ, ಮುಖ್ಯಮಂತ್ರಿಗಳು ಅಕ್ಟೋಬರ್ 2 ರಂದು ಬೆಳಿಗ್ಗೆ 11–00 ಗಂಟೆಗೆ ನಗರದ ಗಾಂಧೀ ಭವನದಲ್ಲಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆಗಳಾದ 'ಜನಪದ' ಹಾಗೂ 'ಮಾರ್ಚ್ ಆಫ್ ಕರ್ನಾಟಕ' ಮಹಾತ್ಮಗಾಂಧಿ ಕುರಿತ ವಿಶೇಷ ಸಂಚಿಕೆಗಳನ್ನು ಬಿಡುಗಡೆ ಮಾಡುವರು.

ಪಲ್ಲವಿ:ಬಾಬು:ಜಿಪಿಆರ್

# ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2015 –ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಗಾಂಧೀ ಜಯಂತಿ ದಿನವಾದ ಅಕ್ಟೋಬರ್ 2 ರಂದು ಸಂಜೆ 5–00 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿರುವ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2015 ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ 'ಗಾಂಧೀಜಿ ಕನಸು – ಕರ್ನಾಟಕದಲ್ಲಿ ನನಸು' ಪ್ರಚಾರಾಂದೋಲನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಡಾ. ಹೊ. ಶ್ರೀನಿವಾಸಯ್ಯ ಅವರಿಗೆ ಗಾಂಧೀ ಸೇವಾ ಪ್ರಶಸ್ತಿ ಕರ್ನಾಟಕ – 2015 ಅನ್ನು ಪ್ರದಾನ ಮಾಡಲಿದ್ದಾರೆ. ಅಲ್ಲದೆ ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆಗಳಾದ 'ಜನಪದ' ಹಾಗೂ 'ಮಾರ್ಚ್ ಆಫ್ ಕರ್ನಾಟಕ' ಮಹಾತ್ಮಗಾಂಧಿ ಕುರಿತ ವಿಶೇಷ ಸಂಚಿಕೆಗಳನ್ನು ಬಿಡುಗಡೆ ಮಾಡುವರು.

ಬೆಂಗಳೂರು ನಗರದ ಚಿಕ್ಕಪೇಟೆ ಶಾಸಕ ಆರ್.ವಿ. ದೇವರಾಜ್ ಅವರು ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮೂಲಸೌಕರ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಪ್ರಾಸ್ತಾವಿಕ ಭಾಷಣ ಮಾಡುವರು.

ಸಮಾರಂಭದಲ್ಲಿ ಕೇಂದ್ರದ ರಸಗೊಬ್ಬರ ಖಾತೆ ಸಚಿವ ಅನಂತಕುಮಾರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್. ಕೆ. ಪಾಟೀಲ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗೂ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2015 ರ ಆಯ್ಕೆ ಸಮಿತಿ ಅಧ್ಯಕ್ಷರಾದ ಡಾ. ಚಂದ್ರಶೇಖರ ಕಂಬಾರ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಅಂದು ಸಂಜೆ 4-00 ಗಂಟೆಯಿಂದ ರಾಮಚಂದ್ರ ಹಡಪದ್ ಮತ್ತು ತಂಡದವರಿಂದ ಗಾಂಧೀ ಪ್ರಿಯ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಪಲ್ಲವಿ:ಬಾಬು:ಜಿಪಿಆರ್

# ಗಾಂಧೀ ಜಯಂತಿ ಅರ್ಥಪೂರ್ಣಗೊಳಿಸಲು ರಾಜ್ಯಾದ್ಯಂತ ವಾರ್ತಾ ಇಲಾಖೆಯಿಂದ ನಿರಂತರ ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಗಾಂಧೀ ಜಯಂತಿಯನ್ನು ರಾಜ್ಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯಕ್ಕೆ ಅನುಗುಣವಾಗಿ ಕರ್ನಾಟಕ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಸಮನ್ವಯ ಇಲಾಖೆಯನ್ನಾಗಿ ನೇಮಿಸಿದೆ. ಈ ನಿಟ್ಟಿನಲ್ಲಿ ಕಳೆದೆರಡು ವರ್ಷಗಳಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರಂತರ ಕಾರ್ಯಕ್ರಮಗಳನ್ನು ರೂಪಿಸಿದೆ.

ಗಾಂಧೀಜಿ ಮತ್ತು ಅವರ ಸಂದೇಶಗಳನ್ನು ಕುರಿತು ಹಲವಾರು ಪ್ರಕಟಣೆಯನ್ನು ಹೊರತರಲಾಗಿದೆ. ಗಾಂಧೀಜಿ ಕರ್ನಾಟಕಕ್ಕೆ ಪ್ರಥಮ ಬಾರಿ ಭೇಟಿನೀಡಿ 100 ವರ್ಷಗಳು ಸಂದ ಹಿನ್ನೆಲೆಯಲ್ಲಿ ಈ ಭೇಟಿಯ ಶತಮಾನೋತ್ಸವವವನ್ನು ರಾಜ್ಯಾದ್ಯಂತ ಆಚರಿಸಲು ನಿರ್ಧರಿಸಲಾಗಿದೆ. ಬೆಂಗಳೂರಿನ ಗಾಂಧೀಭವನದಲ್ಲಿ "ಗಾಂಧೀ ಕರ್ನಾಟಕ" ಕುರಿತು ಛಾಯಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಇಲಾಖೆಯು ರಾಜ್ಯಾದ್ಯಂತ ವಿಭಿನ್ನವಾಗಿ ಆಚರಿಸುತ್ತಿರುವ ಗಾಂಧೀ ಜಯಂತಿಗೆ ಆಯಾ ಜಿಲ್ಲೆಗಳ ಜಿಲ್ಲಾಡಳಿತ ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿ ಹಾಗೂ ಮದ್ಯಪಾನ ಸಂಯಮ ಮಂಡಳಿ ತುಂಬು ಮನದ ಒತ್ತಾಸೆ ನೀಡುತ್ತಿದೆ.

ಯುವ ಪೀಳಿಗೆಯ ಮನದಲ್ಲಿ ಗಾಂಧೀಜಿ ತತ್ವ ಚಿಂತನೆಗಳನ್ನು ಬಿತ್ತುವ ನಿಟ್ಟಿನಲ್ಲಿ ವಿದ್ಯಾರ್ಥಿ ಸಮೂಹವನ್ನು ಉದ್ದೇಶಿಸಿ, ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಅನುಷ್ಠಾನಗೊಳಿಸಲಾಗಿದೆ. 'ಕಲಾವಿದರು ಕಂಡಂತೆ ಗಾಂಧೀ' ಚಿತ್ರ ಶಿಬಿರವನ್ನು ಆಯೋಜಿಸಿ ಗಾಂಧೀ ಎಂಬ ಮಹಾನ್ ದರ್ಶನದ ಹಲವು ಆಯಾಮಗಳನ್ನು ಹಿಡಿಯುವ ಯತ್ನ ಮಾಡಿದೆ. 'ಗಾಂಧೀಜಿ ಕನಸು- ಕರ್ನಾಟಕದಲ್ಲಿ ನನಸು' ಎನ್ನುವ ಪ್ರಚಾರಾಂದೋಲನವನ್ನು ಈ ಬಾರಿಯಿಂದ ಆರಂಭಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ಇಲಾಖೆಯ 'ಜನಪದ' ಮತ್ತು 'ಮಾರ್ಚ್ ಆಫ್ ಕರ್ನಾಟಕ' ಮಾಸಿಕದ ಅಕ್ಟೋಬರ್ ಸಂಚಿಕೆಯನ್ನು ಗಾಂಧೀ ವಿಶೇಷ ಸಂಚಿಕೆಗಳನ್ನಾಗಿ ರೂಪಿಸಿ ಹೊರತರಲಾಗುತ್ತಿದೆ. ವಾರ್ತಾ ಇಲಾಖೆಯ ಆವರಣದಲ್ಲಿ ಗಾಂಧೀಜಿ ಪ್ರತಿಮೆ ಸ್ಥಾಪಿಸಿ ಗಾಂಧೀಜಿಯವರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮವಿದೆ.

ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ 5 ಲಕ್ಷ ರೂ. ನಗದು ಒಳಗೊಂಡ 'ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ' ಸ್ಥಾಪಿಸಿ, ಗಾಂಧೀ ತತ್ವಗಳನ್ನು ಅನುಷ್ಠಾನಕ್ಕೆ ತಂದು ಅವರ ಅದರ್ಶಗಳಲ್ಲಿ ಜೀವಿಸುತ್ತಿರುವ ಸಾಧಕರಿಗೆ ನೀಡಿ ಗೌರವಿಸುತ್ತದೆ. ಈ ಪುರಸ್ಕಾರ ಇಂದು ನಾಡಿನಲ್ಲಿ ಅತ್ಯಂತ ಪ್ರತಿಷ್ಠಿತವಾದ ಮೌಲ್ಯಯುತ ಪ್ರಶಸ್ತಿಯಾಗಿದೆ. ಕಳೆದೆರಡು ವರ್ಷಗಳಿಂದ ನೀಡಲಾಗುತ್ತಿರುವ ಈ ಪ್ರಶಸ್ತಿ ಈಬಾರಿ ಕರ್ನಾಟಕದಲ್ಲಿ ಗಾಂಧೀ ತತ್ವಚಿಂತನೆಗಳನ್ನು ನೀರೆರೆದು ಪೋಷಿಸುತ್ತಿರುವ ಅಸಾಮಾನ್ಯ ಗಾಂಧೀವಾದಿ ಡಾ. ಹೊ. ಶ್ರೀನಿವಾಸಯ್ಯ ಅವರಿಗೆ ಸಂದಿದೆ.

ಪಲ್ಲವಿ:ಬಾಬು:ಜಿಪಿಆರ್

## ವಿಶ್ವ ಬಿಲಿಯರ್ಡ್ಸ್ ಛಾಂಪಿಯನ್ ಆದ ಪಂಕಜ್ ಅಡ್ವಾಣಿಗೆ ಸಚಿವರ ಅಭಿನಂದನೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ಇತ್ತೀಚಿಗೆ ನಡೆದ ಐ.ಬಿ.ಎಸ್.ಎಫ್. ವಿಶ್ವ ಬಿಲಿಯರ್ಡ್ಸ್ ಛಾಂಪಿಯನ್‌ಶಿಪ್‌ನಲ್ಲಿ ವಿಜೇತರಾದ ಸ್ನೂಕರ್ ಕ್ರೀಡಾಪಟುವಾದ ಪಂಕಜ್ ಅಡ್ವಾಣಿಗೆ ಕ್ರೀಡಾ ಸಚಿವ ಕೆ. ಅಭಯ್‌ಚಂದ್ರ ಅವರು ಅಭಿನಂದಿಸಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್

## ದೇವನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಮರುನಾಮಕರಣ: ಆಸಕ್ತ ಉದ್ದಿಮೆದಾರರಿಂದ ನಿವೇಶನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಬೆಂಗಳೂರು ದೇವನಹಳ್ಳಿಯಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 3200 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿ ಪಡಿಸಿರುವ, ಏರೋಸ್ಪೇಸ್ ಪಾರ್ಕ್,. ಏರೋಸ್ಪೇಸ್ ವಿಶೇಷ ಆರ್ಥಿಕ ವಲಯ, ಐಟಿ ಪಾರ್ಕ್ ಹಾರ್ಡ್‌ವೇರ್ ಪಾರ್ಕ್ ಕೈಗಾರಿಕಾ ಪ್ರದೇಶಗಳನ್ನು ಒಂದುಗೂಡಿಸಿ "ಹೈಟೆಕ್, ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್" ಎಂದು ಮರು ನಾಮಕರಣ ಮಾಡಲಾಗಿದೆ.

ಆದ್ದರಿಂದ ಮೇಲ್ಕಂಡ ಕೈಗಾರಿಕಾ ವಲಯದಲ್ಲಿ ಆಸಕ್ತಿವುಳ್ಳ ಉದ್ದಿಮೆದಾರರು ನಿವೇಶನ ಕೋರಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯ ಖನಿಜ ಭವನದಲ್ಲಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಚೇರಿಯನ್ನು ಸಂಪರ್ಕಿಸಬಹುದು.

ಪಲ್ಲವಿ:ಬಾಬು:ಜಿಪಿಆರ್

# ಶುಲ್ಕ ಪಾವತಿಸಲು ಅವಧಿ ವಿಸ್ತರಣೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 2015 ರ ಡಿಸೆಂಬರ್‌ನ ವಾಣಿಜ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅಕ್ಟೋಬರ್ 15 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಪಲ್ಲವಿ:ಬಾಬು:ಜಿಪಿಆರ್

# ಉಪ ಕಸುಬುಗಳನ್ನು ಕೈಗೊಂಡು ಸ್ವಾವಲಂಬಿಗಳಾಗುವಂತೆ ರೈತರಿಗೆ ಮುಖ್ಯಮಂತ್ರಿ ಕರೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)

ರೈತರು ವ್ಯವಸಾಯದ ಜೊತೆಗೆ ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ, ಮೀನುಗಾರಿಕೆ ಮುಂತಾದ ಉಪ ಕಸುಬುಗಳನ್ನು ಕೈಗೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ಅವರು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮತ್ತು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಆಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ 'ಪಶುಭವನ ಮತ್ತು ಸೂಪರ್ ಸ್ಪೆಶಾಲಿಟಿ ಪಶು ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆ ಹಾಗೂ ಕುರಿ ಮೇಕೆಗಳ ಬಹೂಪಯೋಗಿ ಆಂಬ್ಯುಲೇಟರಿ ಕ್ಲಿನಿಕ್‌ಗಳ ಲೋಕಾರ್ಪಣೆ ಸಮಾರಂಭ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಾ ರೈತರು ವ್ಯವಸಾಯವೊಂದರ ಮೇಲೆ ಮಾತ್ರ ಅವಲಂಬಿಸಿದಲ್ಲಿ ಕೃಷಿ ಲಾಭದಾಯಕವಾಗುವುದಿಲ್ಲ, ಕೃಷಿ ಜೊತೆಗೆ ಉಪಕಸುಬುಗಳನ್ನು ರೂಢಿಸಿಕೊಳ್ಳುವಂತೆ ಅವರು ತಿಳಿಸಿದರು.

ರಾಜ್ಯದ ಜಾನುವಾರು ಸಂಪತ್ತನ್ನು ವೃದ್ಧಿಸಿಕೊಳ್ಳಬೇಕಾಗಿದೆ ಎಂದ ಅವರು, ಇದಕ್ಕಾಗಿ ಇಲಾಖೆ ವತಿಯಿಂದ ಹೊಸ ತಳಿ ಅಭಿವೃದ್ಧಿ , ಉತ್ತಮ ಮಾರುಕಟ್ಟೆ ಒದಗಿಸುವಿಕೆ ಮತ್ತು ಜಾನುವಾರುಗಳಿಗೆ ರೋಗಬಾರದಂತೆ ಮುನ್ನೆಚ್ಚರಿಕೆ ವಹಿಸುವ ಕೆಲಸವೂ ಸಹ ಪಶುಪಾಲನೆ ಇಲಾಖಾವತಿಯಿಂದ ಆಗಬೇಕಾಗಿದೆ ಎಂದು ತಿಳಿಸಿದರು.

ಕಳೆದ 2012-13 ರಲ್ಲಿ ದನಕರುಗಳು ಕಾಲುಬಾಯಿ ರೋಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾವನ್ನಪ್ಪಿದ್ದು, ತದನಂತರ ಸರ್ಕಾರ ರೋಗ ನಿಯಂತ್ರಣಕ್ಕೆ ಪಲ್ಸ್ ಪೋಲಿಯೋ ಮಾದರಿಯಲ್ಲಿ ಲಸಿಕೆ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಮ್ಮಿಕೊಂಡ ಹಿನ್ನೆಲೆಯಲ್ಲಿ ಇಂದು ಕಾಲುಬಾಯಿ ರೋಗ ಸಂಪೂರ್ಣ ನಿಯಂತ್ರಣದಲ್ಲಿದೆ ಎಂದು ತಿಳಿಸಿದರು.

ನೀಲಿ ನಾಲಿಗೆ ರೋಗದಿಂದ (ಬ್ಲೂ ಟಂಗ್) ಕುರಿ ಸತ್ತರೆ 5000 ರೂ. ಪರಿಹಾರ ನೀಡಲಾಗುವುದು ಎಂದ ಅವರು ಇದಕ್ಕಾಗಿ 8.90 ಕೋಟಿ ರೂ. ಪರಿಹಾರ ಧನ ಒದಗಿಸಲಾಗಿದೆ ಎಂದರು.

ಕುರಿಗಾಹಿಗಳು ಕುರಿಮೇಯಿಸಲು ಹುಲ್ಲುಗಾವಲು ಇಲ್ಲದೇ ಅಲೆಮಾರಿಗಳಂತಾಗಿದ್ದಾರೆ ಎಂದ ಮುಖ್ಯಮಂತ್ರಿಗಳು, ಈ ಕಾರಣ ಹುಲ್ಲುಗಾವಲುಗಳನ್ನು ಸಂರಕ್ಷಿಸುವ ಕೆಲಸ ತ್ವರಿತವಾಗಿ ಆಗಬೇಕಿದೆ ಎಂದರು.

ಕುರಿ ಕಳುವು ಪ್ರಕರಣಗಳನ್ನು ತಡೆಗಟ್ಟಲು ಕುರಿಗಾಹಿಗಳಿಗೆ ಗನ್ ಲೈಸೆನ್ಸ್ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗುವುದು ಎಂದ ಮುಖ್ಯಮಂತ್ರಿಗಳು ರೈತರು ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಕುರಿ ಉಣ್ಣೆ ಮತ್ತು ಮಾಂಸಕ್ಕೆ ಉತ್ತಮ ಮಾರುಕಟ್ಟೆ ಒದಗಿಸಿಕೊಳ್ಳಬಹುದಾಗಿದೆ ಎಂದು ನುಡಿದರು.

ಪಶುಭಾಗ್ಯ ಯೋಜನೆಯಡಿ ಬ್ಯಾಂಕ್ ಮೂಲಕ 1.20 ಲಕ್ಷ ರೂ. ಗಳ ಸಾಲಸೌಲಭ್ಯವನ್ನು ಕುರಿ, ಎಮ್ಮೆ , ಹಸು, ಕೋಳಿ ಸಾಕಾಣಿಕೆಗೆ ನೀಡಲಾಗುತ್ತಿದೆ ಎಂದ ಅವರು, ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಶೇ 50 ರಷ್ಟು ಸಬ್ಸಿಡಿ ಮತ್ತು ಇತರ ವರ್ಗದವರಿಗೆ ಶೇಕಡಾ 25 ರಷ್ಟು ಸಬ್ಸಿಡಿ ನೀಡಲಾಗುತ್ತಿದ್ದು ಇದರಿಂದ ಸಣ್ಣ ರೈತರು ವ್ಯವಸಾಯದ ಜೊತೆಗೆ ಇತರೆ ಉಪ ಕಸುಬುಗಳನ್ನು ಕೈಗೊಳ್ಳಲು ಅನುಕೂಲವಾಗಲಿದೆ ಎಂದರು.

ರಾಜ್ಯ ಸರ್ಕಾರ ಪ್ರತಿ ಲೀಟರ್ ಹಾಲಿಗೆ 4 ರೂ. ಸಬ್ಸಿಡಿ ನೀಡಿದ ಹಿನ್ನೆಲೆಯಲ್ಲಿ ಕಳೆದ ವರ್ಷ ಕ್ಷೀರ ಉತ್ಪಾದನೆ ಶೇ 28 ರಷ್ಟು ಏರಿಕೆಯಾಗಿದ್ದು, ಪ್ರತಿನಿತ್ಯ ಕೆ.ಎಂ.ಎಫ್. ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ 72 ಲಕ್ಷ ಲೀಟರ್ ಹಾಲು ಬರುತ್ತಿದ್ದು ಮುಂಬರುವ ದಿನಗಳಲ್ಲಿ ದಿನವೊಂದಕ್ಕೆ ಒಂದು ಕೋಟಿ ಲೀಟರ್ ಹಾಲು ಸಂಗ್ರಹಣೆ ಮಾಡುವ ಗುರಿಹೊಂದಲಾಗಿದೆ ಎಂದರು.

ಕಾನೂನು ಮತ್ತು ಸಂಸದೀಯ ವ್ಯವಹಾರ, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವ ಟಿ. ಬಿ. ಜಯಚಂದ್ರ ಅವರು ಮಾತನಾಡಿ ಪಶುಪಾಲನೆಗೆ ಸಂಬಂಧಿಸಿದಂತೆ ಹೈನುಗಾರಿಕೆ, ಕುರಿಸಾಕಾಣಿಕೆ, ಕೋಳಿ, ಹಂದಿ ಸಾಕಾಣಿಕೆ, ಕೇಂದ್ರ ಆಡಳಿತ ಕಚೇರಿ, ಆಯುಕ್ತಾಲಯ, ಕ್ಯುಸಿಪಿಐಫ್, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಯಮಿತ, ರೋಗ ಆಧ್ಯಯನ ವಿಭಾಗ, ಜಾನುವಾರು ಅಭಿವೃದ್ಧಿ ಸಂಸ್ಥೆ ಮುಂತಾದ ಕಚೇರಿಗಳನ್ನು ಒಂದೇ ಸೂರಿನಡಿ ಒದಗಿಸುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ 37 ಕೋಟಿ ರೂ. ವೆಚ್ಚದಲ್ಲಿ ಪಶುಭವನ ನಿರ್ಮಾಣಗೊಳ್ಳಲಿದೆ ಎಂದು ತಿಳಿಸಿದರು.

ಕಾಲುಬಾಯಿ ಜ್ವರದಿಂದ ದನಕರುಗಳು ಸಾಕಷ್ಟು ಸಂಖ್ಯೆಯಲ್ಲಿ ಮೃತಪಟ್ಟಿದ್ದು, ಹಸು ಕಳೆದುಕೊಂಡಂತಹ ರೈತರಿಗೆ ಪರಿಹಾರ ನೀಡಲು ಸರ್ಕಾರ 27 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದೆ ಎಂದ ಅವರು ರೋಗ ತಡೆಗಟ್ಟಲು ಪ್ರತಿ ಆರು ತಿಂಗಳಿಗೊಮ್ಮೆ ವ್ಯಾಪಕವಾಗಿ ಲಸಿಕೆ ಹಾಕಲಾಗುತ್ತಿದ್ದು ಶೇ. 98 ರಷ್ಟು ಲಸಿಕೆ ಕಾರ್ಯಕ್ರಮ ಯಶಸ್ವಿಯಾಗಿದ್ದು ಭಾರತ ಸರ್ಕಾರದಿಂದ ಪ್ರಶಂಸೆ ದೊರೆತಿದೆ ಎಂದರು.

ರಾಜ್ಯದಲ್ಲಿ 9571213 ಕುರಿ ಹಾಗೂ 4790797 ಮೇಕೆಗಳಿದ್ದು ಸುಮಾರು 21 ಲಕ್ಷದಷ್ಟು ಕುರಿಮೇಕೆಯನ್ನು ಮಾಂಸಕ್ಕಾಗಿ ಬಳಸಲಾಗುತ್ತಿದೆ ಎಂದ ಅವರು, ಕುರಿ ಮೇಕೆ ಉತ್ಪಾದನೆ ಹೆಚ್ಚಿಸಲು ಇಲಾಖೆ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ ಎಂದರು.

ಇದಕ್ಕೂ ಮುನ್ನ ಪಶುಭವನ ಕಟ್ಟಡದ ಗುದ್ದಲಿ ಪೂಜೆ, ಸೂಪರ್ ಸ್ಪೆಶಾಲಿಟಿ ಪಶು ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿಗಳು ನೆರವೇರಿಸಿದರು. ಸಚಿವ ರಾಮಲಿಂಗಾ ರೆಡ್ಡಿ ಅವರು ಕುರಿ, ಮೇಕೆಗಳ ಅಂಬ್ಯುಲೇಟರಿ ಕ್ಲಿನಿಕ್‌ಗಳನ್ನು ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಂಡಿತ್‌ರಾವ್ ಚಿದ್ರಿ, ಶಾಸಕರಾದ ವಿನಶಾ ನೀರೋ, ಪಾಲಿಕೆ ಸದಸ್ಯರಾದ ಪ್ರಮೀಳಾ ಆನಂದ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಪಲ್ಲವಿ:ಮಮತ:ಜಿಪಿಆರ್.

## ಗೋವಾ ಕನ್ನಡಿಗ ಸಂತ್ರಸ್ಥರ ಭೇಟಿ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)**

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಸುಭಾಶ್ ಎಸ್ ಛಾಯಾಗೋಳ್ ಅವರು ಇಂದು ಬೆಳಿಗ್ಗೆ ಗೋವಾದ ಬೈನಾ ಬೀಚ್‌ನಲ್ಲಿ ನೆಲಸಮಗೊಳಿಸಿರುವ ಕನ್ನಡಿಗರ 157 ವಸತಿ ಪ್ರದೇಶಗಳ ಪರಿಶೀಲನೆ ನಡೆಸಿದರು. ಅಲ್ಲಿರುವ ಕನ್ನಡಿಗ ಸಂತ್ರಸ್ಥರನ್ನು ಭೇಟಿ ಮಾಡಿ ಅಹವಾಲು ಸ್ವೀಕರಿಸಿದರು. ನಂತರ ಅವರು ದಕ್ಷಿಣ ಗೋವಾ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ನಿರಾಶ್ರಿತ ಕನ್ನಡಿಗರಿಗೆ ಪುನರ್ವಸತಿ ಕಲ್ಪಿಸಲು ಒತ್ತಾಯಿಸಿದರು ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಪಲ್ಲವಿ/ಬಾಬು/ಕೆಎಂ

ಛಾಯಾಚಿತ್ರ ಲಗತ್ತಿಸಿದೆ)

## ಅಕ್ರಮ ಔಷಧ ವಶ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)**

ಔಷಧ ನಿಯಂತ್ರಣ ಇಲಾಖೆಯ ರಾಜ್ಯ ಗುಪ್ತ ವಾರ್ತಾ ಶಾಖೆಯ ಸಹಾಯಕ ಔಷಧ ನಿಯಂತ್ರಕರು ಶ್ರೀಮತಿ. ಸಿ. ಮಂಜುಳ ರವರು ಮೆ॥ ಮೆಡಿಸ್ಮಿತ್ ಫಾರ್ಮ ಲ್ಯಾಬ್ಸ್, ಬೆಂಗಳೂರು-26 ಸಂಸ್ಥೆಯವರು ತಯಾರಿಸಿರುವ **ಪೋವಿಡಾನ ಐಯೋಡಿನ್ ಸೊಲೂಷನ್** ಐ.ಪಿ.5%, ಬ್ಯಾಚ್ ಸಂಖ್ಯೆ: 011 ಎಂಬ ಉತ್ತಮ ಗುಣಮಟ್ಟದಲ್ಲವೆಂದು ಘೋಷಿತವಾದ ಔಷಧವನ್ನು ಮೆ॥ ಮೆಡಿಸ್ಮಿತ್ ಫಾರ್ಮ ಲ್ಯಾಬ್ಸ್, ಬೆಂಗಳೂರು-26 ಸಂಸ್ಥೆಯಲ್ಲಿ ದಾಸ್ತಾನಿದ್ದ 1380x500 ml ಬಾಟಲುಗಳನ್ನು, ರೂ.2,29,770/-ಮೌಲ್ಯದ ಔಷಧವನ್ನು ವಶಪಡಿಸಿಕೊಂಡಿರುತ್ತಾರೆ ಮತ್ತು ಮೆ॥ ಸಾಲೂಡ್ ಕೇರ್ (ಇಂ) ಪ್ರೈ.ಲಿ., ರೂರ್ಕಿ ಸಂಸ್ಥೆಯವರು ತಯಾರಿಸಿರುವ **ಡಾಕ್ಸಿಜೆನ್ ಟ್ಯಾಬ್ಲೆಟ್ಸ್ (ಡಾಕ್ಸಿಲಮೈನ್ ಸಕ್ಸಿನೇಟ್, ಪಿರಿಡಾಕ್ಸಿನ್ ಹೈಡ್ರೋಕ್ಲೋರೈಡ್ ಮತ್ತು ಫೋಲಿಕ್ ಆಸಿಡ್ ಟ್ಯಾಬ್ಲೆಟ್ಸ್)**, ಬ್ಯಾಚ್ ಸಂಖ್ಯೆ: ಎಸ್‌ಟಿ14-1012 ಎಂಬ ಉತ್ತಮ ಗುಣಮಟ್ಟದಲ್ಲವೆಂದು ಘೋಷಿತವಾದ ಔಷಧವನ್ನು ಮೆ॥ ಪ್ಯಾರಾಮೌಂಟ್ ಫಾರ್ಮ ಡಿಸ್ಟ್ರಿಬ್ಯೂಟರ್ಸ್, ಚಾಮರಾಜಪೇಟೆ,

ಬೆಂಗಳೂರು–18 ಸಂಸ್ಥೆಯಲ್ಲಿ ದಾಸ್ತಾನಿದ್ದ 7460 ಮಾತ್ರೆಗಳನ್ನು, ರೂ.29,094/–ಮೌಲ್ಯದ ಔಷಧವನ್ನು ವಶಪಡಿಸಿಕೊಂಡಿರುತ್ತಾರೆ

ಆದ್ದರಿಂದ ಸದರಿ ಬ್ಯಾಚ್ ಸಂಖ್ಯೆಯ ಔಷಧವನ್ನು, ಔಷಧಗಳ ಚಿಲ್ಲರೆ, ಸಗಟು ಮಾರಾಟಗಾರರು, ವೈದ್ಯರು, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂನವರು ದಾಸ್ತಾನು ಮಾಡುವುದಾಗಲೀ, ಮಾರಾಟ ಮಾಡುವುದಾಗಲೀ ಅಥವಾ ಉಪಯೋಗಿಸುವುದಾಗಲೀ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ. ಹಾಗೂ ಸದರಿ ಔಷಧದ ದಾಸ್ತಾನನ್ನು ಹೊಂದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಕ್ಷೇತ್ರದ ಔಷಧ ಪರಿವೀಕ್ಷಕರು ಅಥವಾ ಸಹಾಯಕ ಔಷಧ ನಿಯಂತ್ರಕರ ಗಮನಕ್ಕೆ ತರಲು ಕೋರಿದೆ. ಸಾರ್ವಜನಿಕರು ಈ ಬ್ಯಾಚ್ ಸಂಖ್ಯೆಯ ಔಷಧವನ್ನು ಉಪಯೋಗಿಸಬಾರದೆಂದು ಔಷಧ ನಿಯಂತ್ರಣ ಇಲಾಖೆ ತಿಳಿಸಿದೆ.

# Drugs seized

Bangalore, September 30 (Karnataka Information)

The Assistant Drugs Controller, Smt C.Manjula of the State Intelligence Branch, Drugs Control Department, Bangalore has seized Not of Standard Quality drugs Povidone Iodine solution I.P.5%, B.No:011 Mfd. By: M/s Medismith Pharma Labs, Bangalore-560026, Qty 1380 x500 ml bottles of stocks worth about Rs. 2,29,770/- from M/s Medismith Pharma Labs, Bangalore-560026 and DoxyGen Tablets (Doxylamine Succinate, Pyridoxine Hydrochloride & Folic Acid Tablets), B.No. ST14-1012, Mfd. By: Salud Care (I) Pvt. Ltd., Roorkee, Qty 7460 tablets of stocks worth about Rs. 29,094/- from M/s Paramount Pharma Distributors, Chamrajpet, Bangalore-18.

The Chemists, Wholesalers, Doctors, Hospitals, Nursing Homes are directed not to stock, sell or use these batches of drugs and in case, they hold any stock they are requested to intimate the concerned area Drugs Inspector or Assistant Drugs Controller. Further the public are requested not to use these batches of drugs.

**ಗ್ರಾಮಪಂಚಾಯಿತಿ ಸದಸ್ಯರಿಗೆ ಕಾನೂನಿನ ಅರಿವು, ಆರ್ಥಿಕ ಶಿಸ್ತು ಮೂಡಿಸಿ:**

. **ಹೆಚ್.ಕೆ. ಪಾಟೀಲ್**

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)**

ಗ್ರಾಮಪಂಚಾಯತ್‌ನ ನೂತನ ಸದಸ್ಯರಿಗೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾನೂನಿನ ಅರಿವು ಮೂಡಿಸುವಂತೆ ಜಿಲ್ಲಾ ಓಂಬಡ್ಸ್‌ಮನ್‌ಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಎಚ್.ಕೆ.ಪಾಟೀಲ, ಕರೆ ನೀಡಿದ್ದಾರೆ.

ಅವರು ಇಂದು ವಿಧಾನಸೌಧದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಓಂಬಡ್ಸ್‌ಮನ್ ಹಾಗೂ ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕಾನೂನು ಬಳಕೆ ಮಾಡಲು ತೊಡಕುಗಳು ಹಾಗೂ ಸಲಹೆಗಳನ್ನು ಪಡೆಯುವ ಸಲುವಾಗಿ ಈ ಕಾರ್ಯಗಾರ ಹಮ್ಮಿಕೊಂಡಿದ್ದು, ಗ್ರಾಮಪಂಚಾಯತ್‌ನ ನೂತನ ಸದಸ್ಯರಿಗೆ ಅಭಿವೃದ್ಧಿ ಕಾಮಗಾರಿಗಳಿಗೆ ಬಗ್ಗೆ ಲಘು ಭಾವನೆ ತಾಳದಂತೆ ಅವರಿಗೆ ಕಾನೂನಿನ ಅರಿವು ಮೂಡಿಸಬೇಕಿದೆ. ಅವರಲ್ಲಿ ಆರ್ಥಿಕ ಶಿಸ್ತು ಮೂಡಿಸಿದರೆ ಮುಂದಿನ ಅವಧಿಯಲ್ಲಿ ಉತ್ತಮ ಆಡಳಿತವನ್ನು ನಿರೀಕ್ಷಿಸಬಹುದಾಗಿದೆ. ಇಲ್ಲವಾದಲ್ಲಿ ಆರ್ಥಿಕ ಅಶಿಸ್ತಿನಿಂದ ತಳಮಟ್ಟದಲ್ಲಿ ಅಭಿವೃದ್ಧಿಯನ್ನು ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ ಎಂದ ಸಚಿವರು, ಮಹಾತ್ಮಗಾಂಧಿ ನರೇಗಾ ಯೋಜನೆಯ ಉದ್ದೇಶ ಸಫಲವಾಗಬೇಕಾದರೆ ತಳಮಟ್ಟದಲ್ಲಿ ಕಾಮಗಾರಿಗಳ ಅನುಷ್ಠಾನ ಪಾರದರ್ಶಕತೆಯಿಂದ ಕೂಡಿರಬೇಕು. ಮತ್ತು ಕೆಲಸಕ್ಕಾಗಿ ಬೇಡಿಕೆ ಪಡೆಯಲು ಅಕುಶಲ ಕಾರ್ಮಿಕರು ಮುಂದೆ ಬರಲು ಹಿಂಜರಿಯುತ್ತಿರುವುದು ಅವರಲ್ಲಿ ಇನ್ನೂ ಅರಿವಿನ ಕೊರತೆ ಕಾಣುತ್ತಿದ್ದು, ಓಂಬಡ್ಸ್‌ಮನ್‌ರವರು ಗ್ರಾಮಪಂಚಾಯಿತಿ ಮಟ್ಟದಲ್ಲಿ ಮೂರ್‍ನಾಲ್ಕು ಪಂಚಾಯಿತಿಗಳ ಚುನಾಯಿತ ಸದಸ್ಯರನ್ನು ಒಂದೆಡೆ ಸೇರಿಸಿಕೊಂಡು ಅರಿವು ಮೂಡಿಸಬೇಕು ಎಂದರು.

ಗ್ರಾಮಗಳ ಸ್ವರೂಪವನ್ನು ಬದಲಾಯಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಬಹುದಾದ 13 ಕಾಮಗಾರಿಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಅದರಲ್ಲೂ ಗ್ರಾಮೀಣ ಕ್ರೀಡಾಕೂಟಗಳನ್ನು ಪ್ರೋತ್ಸಾಹಿಸಲು ಯುವಜನರ ಸಭೆಯನ್ನು ಗ್ರಾಮಮಟ್ಟದಲ್ಲಿ ನಡೆಸಿ ಅವರಿಗೆ ತಿಳುವಳಿಕೆ ನೀಡಿದರೆ ಅವರುಗಳು ಯೋಜನೆಯಲ್ಲಿ ಭಾಗಿದಾರರಾಗಲಿದ್ದಾರೆ ಎಂದರು.

ವಿವಿಧ ಯೋಜನೆಯಡಿ ಕಾಮಗಾರಿಗಳ ಪರಿಶೋಧನೆ ನಡೆಸಲು ಸಾಮಾಜಿಕ ಪರಿಶೋಧನೆ ಘಟಕವನ್ನು ತೆರೆದಿದ್ದು ವರ್ಷಕ್ಕೆ ಎರಡು ಭಾರಿ ಸಾಮಾಜಿಕ ಪರಿಶೋಧನೆ ನಡೆಸಲಾಗುತ್ತಿದೆ. ಸಾಮಾಜಿಕ ಪರಿಶೋಧನೆಯಿಂದ ಕಾಮಗಾರಿಗಳ ಭೌತಿಕ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗುತ್ತದೆ. ಇದರಿಂದ ಗ್ರಾಮಪಂಚಾಯಿತಿ ಮಟ್ಟದಲ್ಲಿ ನಡೆಯುವ ಲೋಪಗಳನ್ನು ತಡೆಯಲು ಸಹಕಾರಿಯಾಗುತ್ತದೆ ಎಂದ ಸಚಿವರು, ಸ್ವಚ್ಛಭಾರತ ಮಿಷನ್ ಯೋಜನೆಯಡಿ ಈ ವರ್ಷ 2200 ಗ್ರಾಮಗಳನ್ನು ಬಯಲು ಶೌಚ ಮುಕ್ತ ಗ್ರಾಮಗಳನ್ನಾಗಿ ಘೋಷಿಸಬೇಕಿತ್ತು. ಆದರೆ ಸಾಮಾಜಿಕ ಪರಿಶೋಧನೆಯಿಂದ ಈ ಗ್ರಾಮಗಳಲ್ಲಿ ವಾಸ್ತವವಾಗಿ ಬಯಲುಶೌಚ ಮುಕ್ತ ಗ್ರಾಮಗಳ ಸಂಖ್ಯೆ ಇಳಿಮುಖವಾಗಿ ಸದ್ಯ 240 ಗ್ರಾಮಗಳನ್ನು ಬಯಲು ಶೌಚ ಮುಕ್ತ ಗ್ರಾಮಗಳೆಂದು ಘೋಷಿಸಲಾಗುತ್ತಿದೆ. ರಾಜ್ಯದ 4 ಜಿಲ್ಲೆಗಳನ್ನು ಬಯಲು ಶೌಚಮುಕ್ತ ಗ್ರಾಮಗಳೆಂದು ಘೋಷಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಓಂಬಡ್ಸ್‌ಮನ್ ಹಾಗೂ ಸಾಮಾಜಿಕ ಪರಿಶೋಧನೆಯ ಸಂಯೋಜಕರಿಂದ ಬರುವ ಸಲಹೆ ಹಾಗೂ ಸಮಸ್ಯೆಗಳನ್ನು ಈಡೇರಿಸುವಂತೆ ಆಯುಕ್ತರಿಗೆ ಸಚಿವರು ಸೂಚಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹಾತ್ಮಗಾಂಧಿ ನರೇಗಾ ಯೋಜನೆಯ ಆಯುಕ್ತರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ದೂರದೃಷ್ಠಿಯಂತೆ ಯೋಜನೆಯಡಿ ಕಾಮಗಾರಿ ಅನುಷ್ಠಾನ ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ, ಇದರತ್ತ ಎಲ್ಲರೂ ಗಮನಹರಿಸಿ ಅವರ ಕಲ್ಪನೆಯನ್ನು ಈಡೇರಿಸಲು ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು.

## ನಗರದ ಸರ್ವತೋಮುಖ ಅಭಿವೃದ್ಧಿಗೆ ಪಾಲಿಕೆ ಸದಸ್ಯರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು- ಸಿದ್ದರಾಮಯ್ಯ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿಗೆ ನಗರಪಾಲಿಕೆಗೆ ನೂತನವಾಗಿ ಆಯ್ಕೆಗೊಂಡಿರುವ ಎಲ್ಲಾ ನಗರಪಾಲಿಕೆ ಸದಸ್ಯರರು ಪಕ್ಷಬೇದ ಮರೆತು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಕರೆ ನೀಡಿದರು.

ವಿಧಾನ ಸೌಧದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದು ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಜನಪ್ರತಿನಿಧಿಗಳಿಗೆ ಏರ್ಪಡಿಸಿದ್ದ ಆರೋಗ್ಯ ಯೋಜನೆಗಳ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಅವರು ಚುನಾವಣೆ ಮುಗಿಯುವವರೆಗೆ ಮಾತ್ರ ಪಕ್ಷ ರಾಜಕೀಯ ಚುನಾಯಿತರಾದ ಮೇಲೆ ಎಲ್ಲ ನಗರಪಾಲಿಕೆ ಸದಸ್ಯರು ನಿಮ್ಮ ಆದ್ಯತೆ ನಗರದ ಅಭಿವೃದ್ಧಿಗೆ ನೀಡಬೇಕು ಎಂದರು.

ಬೆಂಗಳೂರಿನಲ್ಲಿ 3500 ಮೆಟ್ರಿಕ್ ಟನ್ ಕಸ ಉತ್ಪಾದನೆಯಾಗುತ್ತಿದೆ ಘನತ್ಯಾಜ್ಯ ವಿಲೇವಾರಿ ಒಂದು ಸವಾಲಿನ ಕೆಲಸ ಎಂದ ಶ್ರೀ ಸಿದ್ದರಾಮಯ್ಯ ಅವರು ಘನತ್ಯಾಜ್ಯ ವಿಲೇವಾರಿ ಜೊತೆಗೆ ಪ್ರತಿ ಸದಸ್ಯರು ತಮ್ಮ ವಾರ್ಡುಗಳನ್ನು ಸ್ವಚ್ಛವಾಗಿಡಲು ಪಣತೊಡಬೇಕು ಎಂದರು.

ಬೆಂಗಳೂರು ನಗರದಲ್ಲಿ ಸುಮಾರು ಒಂದು ಕೋಟಿ ಜನರು ವಾಸಮಾಡುತ್ತಿದ್ದಾರೆ. ಅದರಲ್ಲಿ 20 ಲಕ್ಷದಷ್ಟು ಜನರು ಕೊಳಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಅಸಂಘಟಿತ ಜನ ಲಕ್ಷಾಂತರ ಮಂದಿ ನೆಲೆಸಿದ್ದಾರೆ ಎಂದ ಮುಖ್ಯಮಂತ್ರಿ ಅವರು ಈ ವರ್ಗದವರು ವಾಸಿಸುವ ಸ್ಥಳಗಳಿಗೆ ಮೂಲಭೂತ ಸೌಲಭ್ಯ ಹಾಗೂ ಸ್ವಚ್ಛತೆ ಕಾಪಾಡಲು ಬೆಂಗಳೂರು ಮಹಾಗನರಪಾಲಿಕೆ ಅಧಿಕಾರಿಗಳು ಹಾಗೂ ನಗರಪಾಲಿಕೆ ಸದಸ್ಯರು ಆದ್ಯತೆ ಮೇರೆ ಕೆಲಸ ಮಾಡಬೇಕು ಎಂದರು.

ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಸರಬರಾಜು ಮಾಡುತ್ತಿರುವ ನೀರಿನಲ್ಲಿ ಶೇ. 49 ರಷ್ಟು ನೀರು ಸೋರಿಕೆಯಾಗುತ್ತದೆ. ಇದರಲ್ಲಿ ಕನಿಷ್ಠ 20 ರಷ್ಟು ಸೋರಿಕೆ ತಡೆಗಟ್ಟಿದರು ನಗರದ ಹೊಸ ಬಡಾವಣೆಗಳಿಗೆ ಕಾವೇರಿ ನೀರು ಪೂರೈಕೆ ಮಾಡಬಹುದು ಎಂದ ಮುಖ್ಯಮಂತ್ರಿ ಅವರು ಬೆಂಗಳೂರಿನಲ್ಲಿ ಪ್ರತಿ ವರ್ಷ 5 ಸಾವಿರ ಕೋಟಿ ರೂ. ತೆರಿಗೆ ಸಂಗ್ರಹವಾಗಬೇಕು ಆದರೆ ಸಧ್ಯ 2 ಸಾವಿರ ಕೋಟಿ ತೆರಿಗೆಯೂ ಸಂಗ್ರಹವಾಗುತ್ತಿಲ್ಲ ಈ ವರ್ಷ ಕನಿಷ್ಠ 3 ಸಾವಿರ ಕೋಟಿ ತೆರಿಗೆ ಸಂಗ್ರಹಿಸುವಂತೆ ಅಧಿಕಾರಿಗಳು ಸೂಚಿಸಿದರು.

ಇನ್ನು ಮುಂದೆ ನಾನು 15 ದಿನಕ್ಕೊಮ್ಮೆ ನಗರ ಪ್ರದಕ್ಷಿಣೆ ಕೈಗೊಳ್ಳುತ್ತೇನೆ ಎಂದ ಶ್ರೀ ಸಿದ್ದರಾಮಯ್ಯ ಅವರು ಆ ಸಮಯದಲ್ಲಿ ಸಮರ್ಪಕ ಕಸವಿಲೇವಾರಿ ಆ ಪ್ರದೇಶ ಸ್ವಚ್ಚವಾಗಿಲ್ಲದಿದ್ದರೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದರು.

ನೀವು ಎಷ್ಟು ಕೋಟಿ ಕಾಮಗಾರಿ ಕೆಲಸ ಮಾಡಿದರು ಜನ ತೃಪ್ತರಾಗಲ್ಲ ಆದರೆ, ಜನರು ಅನಾರೋಗ್ಯ ಪೀಡಿತರಾಗಿದ್ದಾಗ ಅವರ ನೆರವಿಗೆ ತಕ್ಷಣಧಾವಿಸಿ ಚಿಕಿತ್ಸೆ ನೀಡಿ ಪ್ರಾಣ ಹಾನಿ ತಪ್ಪಿಸಿದ್ದಲ್ಲಿ ಅವರು ಜೀವನ ಪರ್ಯಂತ ತಮ್ಮನ್ನು ಮರೆಯುವುದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದರು.

ಸಾರಿಗೆ ಹಾಗೂ ಬೆಂಗಳೂರು ಉಸ್ತುವಾರಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಶ್ರೀ ದಿನೇಶ್ ಗುಂಡೂರಾವ್ ಮಹಾಪೌರರಾದ ಶ್ರೀ ಮುಂಜುನಾಥ ರೆಡ್ಡಿ, ಉಪ ಮಹಾಪೌರರಾದ ಶ್ರೀಮತಿ ಹೇಮಲತಾ ನೂತನವಾಗಿ ಆಯ್ಕೆಗೊಂಡಿರುವ ನಗರಪಾಲಿಕೆ ಸದಸ್ಯರು, ಅಧಿಕಾರಿಗಳು ಕಾರ್ಯಾಗಾರದಲ್ಲಿ ಹಾಜರಿದ್ದರು.

ಪಲ್ಲವಿ/ಬಾಬು/ಕೆಪಿಪಿ/ಕೆಎಂ

## ರಾಜ್ಯದ ಬರದ ಹಿನ್ನೆಲೆಯಲ್ಲಿ ರೈತರು ಪಡೆದ ಮಧ್ಯಮಾವದಿ ವರದಿ ಹಾಗೂ ದೀರ್ಘಾವಧಿ ಸಾಲಿನ ಮೇಲಿನ ಬಡ್ಡಿ ಮನ್ನಾ – ಶ್ರೀ ಮಹದೇವಪ್ರಸಾದ್

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಬರಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರು ಪಡೆದಿರುವ ಮಧ್ಯಮಾವಧಿ ಹಾಗೂ ಧೀರ್ಘಾವದಿ ಸಾಲದ ಕಂತನ್ನು ಮರುಪಾವತಿಸಲು ಒಂದು ವರ್ಷದವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಸಹಕಾರ ಹಾಗೂ ಸಕ್ಕರೆ ಸಚಿವರಾದ ಶ್ರೀ ಮಹದೇವಪ್ರಸಾದ್ ಅವರು ತಿಳಿಸಿದರು.

ವಿಧಾನ ಸೌಧದಲ್ಲಿ ಸುದ್ದಿಗಾರರೊಂದಿಗೆ ಇಂದು ಮಾತನಾಡಿದ ಸಚಿವರು ಈ ಅವಧಿಯಲ್ಲಿ 2300 ಕೋಟಿ ಸಾಲ ವಿತರಿಸಲಾಗಿತ್ತು. ಅದರ ಬಡ್ಡಿ ಮೊತ್ತ 292 ಕೋಟಿಗಳಷ್ಟಿತ್ತು ಎಂದ ಸಚಿವರು ಸದರಿ ಸಾಲದ ಬಡ್ಡಿ ರೂ. 292 ಕೋಟಿಗಳನ್ನು ಸರ್ಕಾರವೇ ಭರಿಸಲಿದೆ ಎಂದರು.

ಕಳೆದ ಸಾಲಿನಲ್ಲಿ 21 ಲಕ್ಷ ರೈತರಿಗೆ 9800 ಕೋಟಿ ರೂ.ಗಳನ್ನು ಸಹಕಾರ ಸಂಸ್ಥೆಗಳಿಂದ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗಿದ್ದು, ಶೇ 95 ರಷ್ಟು ರೈತರು ಸಾಲ ಮರುಪಾವತಿ ಮಾಡಿದ್ದಾರೆ ಎಂದು ತಿಳಿಸಿದ ಶ್ರೀ ಮಹದೇವಪ್ರಸಾದ್ ಅವರು ರೈತರು ಪಡೆದಿರುವ ಸಾಲಕ್ಕೆ ಸಂಬಂಧಿಸಿದಂತೆ ಬಲವಂತ ವಸೂಲಾತಿ ಹಾಗೂ ನೋಟೀಸುಗಳನ್ನು ನೀಡದಂತೆ ಬ್ಯಾಂಕುಗಳಿಗೆ ಈಗಾಗಲೇ ಸೂಚಿಸಲಾಗಿದೆ ಎಂದರು ತಿಳಿಸಿದರು.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 5.6 ಲಕ್ಷ ಕೋಟಿ ರೂ. ಠೇವಣಿ ಇದ್ದು ಕೇವಲ 23 ಸಾವಿರ ಕೋಟಿ ಸಾಲ ನೀಡಿದ್ದಾರೆ ಎಂದು ತಿಳಿಸಿದ ಸಹಕಾರ ಸಚಿವರು ಆದರೆ ಸಹಕಾರಿ ಬ್ಯಾಂಕುಗಳಲ್ಲಿ 22 ಸಾವಿರ ಕೋಟಿ ಠೇವಣಿ ಇದ್ದು 900 ಕೋಟಿ ಮಾತ್ರ ರೈತರಿಗೆ ಸಾಲ ನೀಡಿದೆ ಎಂದರು.

ನಮ್ಮ ಸರ್ಕಾರ ರೈತರ ಸರ್ಕಾರವಾಗಿದ್ದು ರೈತರ ಸಮಸ್ಯೆಗಳಿಗೆ ಸ್ಪಂದಿಸಲಿದೆ ಎಂದ ಶ್ರೀ ಮಹದೇವಪ್ರಸಾದ್ ಅವರು ಕಬ್ಬು ಬೆಳೆಗಾರರಿಗೆ ನೀಡಬೇಕಾಗಿರುವ ಬಾಕಿ ಹಣ ಕ್ರೋಢೀಕರಿಸುವಲ್ಲಿಯೂ ಕ್ರಮ ಕೈಗೊಂಡಿದೆ ಎಂದರು.

ಪಲ್ಲವಿ/ಕೆಪಿಪಿ/ಕೆಎಂ

## ಲೋಕಸೇವಾ ಆಯೋಗ ಪ್ರದಸ ಪರೀಕ್ಷಾ ಕೇಂದ್ರ ತಿದ್ದುಪಡಿ

**ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು 4-10-2015 ರಂದು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನಡೆಸುವ ಪರೀಕ್ಷೆಗೆ ಹಾವೇರಿ ಜಿಲ್ಲೆಯಡಿ MENS ENGLISH MEDIUM PRIMARY SCHOOL, HAVERI ಎಂದು ನೀಡಿದ್ದು, ಸದರಿ ಪರೀಕ್ಷಾ ಕೇಂದ್ರವನ್ನು LIONS ENGLISH MEDIUM PRIMARY SCHOOL, HAVERI ಎಂದು ಓದಿಕೊಳ್ಳುವಂತೆ ಸಂಬಂಧಿಸಿದ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಪಲ್ಲವಿ/ಕೆಎಂ